19) ಬಿಜಾಪುರ ಹಾಗೂ ಕಾರವಾರಗಳಲ್ಲಿ ಪದವಿಯೋತ್ತರ ವ್ಯಾಸಂಗವನ್ನು ಪ್ರಾರಂಭಿಸುವ ಬಗ್ಗೆ ಅನುಮತಿ ಹಾಗೂ ಆರ್ಥಿಕ ಸಹಾಯದ ಬಗ್ಗೆ

ಶ್ರೀ ಎಂ. ಎಲ್. ಉಸ್ತಾರ್.—ಮಾನ್ಯ ಸಭಾಧ್ಯಕ್ಷರೇ, ೧೯೬೭–೬೮ನೇ ಸಾಲಿನಿಂದ ಬಿಜಾಪುರ ಹಾಗೂ ಕಾರವಾರಗಳಲ್ಲಿ ಪದವಿಯೋತ್ತರ ವ್ಯಾಸಂಗವನ್ನು ಪ್ರಾರಂಭಿಸುವ ಬಗ್ಗೆ ವಿಶ್ವವಿದ್ಯಾಲಯ ಸಹಾಯಧನ ಆಯೋಗಕ್ಕೆ ಈಗಾಗಲೇ ಶಿಫಾರಸ್ಸನ್ನು ಕಳುಹಿಸಿದ್ದು, ಈ ಕೇಂದ್ರಗಳನ್ನು ಪ್ರಾರಂಭಿಸುವ ಬಗ್ಗೆ ಅನುಮತಿ ಹಾಗೂ ಅವಶ್ಯಕ ಆರ್ಥಿಕ ಸಹಾಯಕ್ಕಾಗಿ ಸರಕಾರವನ್ನು ಕೋರಿದ್ದಾಗ್ಯೂ ಈವರೆಗೂ ಆ ಬಗ್ಗೆ ಯಾವ ಕ್ರಮವನ್ನೂ ಕೈಕೊಳ್ಳದಿರುವುದರಿಂದ ಕೂಡಲೇ ಅನುಮತಿ ಹಾಗೂ ಅವಶ್ಯಕ ಆರ್ಥಿಕ ಸಹಾಯವನ್ನು ನೀಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಉನ್ನತ ಶಿಕ್ಷಣ ಮಂತ್ರಿಗಳ ಪರವಾಗಿ).—ಮಾನ್ಯ ಸಭಾಧ್ಯಕ್ಷರೇ ಈ ವಿಷಯದ ಬಗ್ಗೆ ವಿಶ್ವವಿದ್ಯಾಲಯ ಆನುದಾನ ಆಯೋಗ (ಯು.ಜಿ.ಸಿ) ಕ್ಕೆ ಕಳುಹಿಸಲಾಗಿದ್ದು ಅವರಿಂದ ಇನ್ನೂ ಉತ್ತರ ಬಂದಿರುವುದಿಲ್ಲ, ಆ ಉತ್ತರ ಬಂದ ನಂತರ ತಕ್ಷಣವೇ, ಪದವಿಯೋತ್ತರ ವ್ಯಾಸಂಗವನ್ನು ಪ್ರಾರಂಭ ಮಾಡುವುದಕ್ಕೆ ನಾವು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ

ಅಧ್ಯಕ್ಷರು.—ಈಗ ಶ್ರೀ ಎಂ. ವೀರಯ್ಯ ಸ್ವಾಮಿ ಅವರ ಪರವಾಗಿ ಶ್ರೀ ಮುಲಕಯ್ಯ ಗುತ್ತೇದಾರ್ ಅವರು ಹೇಳಿಕೆಯನ್ನು ಓದುತ್ತಾರೆ.

20) ಜಿಲ್ಲಾ ಪರಿಷತ್ ಕಾಮಗಾರಿಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರಿಗೆ ದಿನಗೂಲಿಯಲ್ಲಿ ತಾರತಮ್ಯದ ಬಗ್ಗೆ

ಶ್ರೀ ಮುಲಕಯ್ಯ ಗುತ್ತೇದಾರ್.—ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯದಲ್ಲಿ ಹೊಸದಾಗಿ ಜಿಲ್ಲಾ ಪರಿಷತ್ ವ್ಯವಸ್ಥೆ ಬಂದ ಮೇಲೆ ಜಿಲ್ಲಾ ಪರಿಷತ್ ಕಾಮಗಾರಿಗಳಾಗಿ ಲೋಕೋಪಯೋಗಿ ಇಲಾಖೆಯನ್ನು ಹೊರತು ಪಡಿಸಿ ತಾಂತ್ರಿಕ ವಿಭಾಗವನ್ನು ತೆರೆಯಲಾಗಿದೆ. ಈ ರೀತಿ ಹೊಸದಾಗಿ ಪ್ರಾರಂಭಿಸಿರುವ ತಾಂತ್ರಿಕ ವಿಭಾಗ, ಉಪ ವಿಭಾಗಗಳು ಮೊದಲಿನ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ. ಹಾಗೂ ಕೆರು ನೀರಾವರಿ ಇಲಾಖೆಯಿಂದ ಬಂದ ಅನೇಕ ದಿನಗೂಲಿ ನೌಕರರು ಕೆಲಸ ಮಾಡುತ್ತಿದ್ದಾರೆ ಆದರೆ ಕೆಲಸ ಮಾಡುವ ಹೊಣೆಗಾರಿಕೆ ಒಂದೇ ಯಾಗಿದ್ದರೂ ಅವರಿಗೆ ಕೊಡುವ ದಿನಗೂಲಿಯಲ್ಲಿ ತಾರತಮ್ಯವಿದೆ. ಈ ಬಗ್ಗೆ ನನ್ನ ತಾಲ್ಲೂಕಿನ ಉಪವಿಭಾಗದ ನೌಕರರು ಚಳಿಂವಳಿ ನಡೆಸಿದ್ದು ದಿನಗೂಲಿಯ ತಾರತಮ್ಯ ಹೋಗಲಾಡಿಸಲು ಕೇಳಿಕೊಂಡಿದ್ದಾರೆ. ಸರಕಾರ ಕೂಡಲೇ ಸಮಾನ ರೂಪವಾದ ದಿನಗೂಲಿ ಕೊಡಲು ಆದೇಶ ಕೊಡಬೇಕಾಗಿ ವಿನಂತಿ.

೨-೩೦ ಪಿ. ಎಂ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಈ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಆದ್ದರಿಂದ ಅವರಿಗೆ ಈ ವಿಷಯವನ್ನು ತಿಳಿಸಿ ಮಾನ್ಯ ಸದಸ್ಯರಿಗೆ ಕೂಡಲೇ ಈ ಬಗ್ಗೆ ಉತ್ತರ ಒದಗಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ. ನೆನ್ನೆ ದಿವಸ ಮಾನ್ಯ ಕಾನಡೆ ಅವರು ಇಲ್ಲಿ ಬಳಸಿದ ಪದದ ಬಗ್ಗೆ ತಾವು ರೂಲಿಂಗ್ ಕೊಡುತ್ತೇನೆಂದು ಹೇಳಿದ್ದಿರಿ, ಆದ್ದರಿಂದ ತಾವು ರೂಲಿಂಗ್ ಕೊಡಬೇಕು?

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತೇನೆ. ತಾವು ಕುಳಿತುಕೊಳ್ಳಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ನಾರಾಯಣಕುಮಾರ್ ಅವರು ಎಲ್ಲಿ ನೆನ್ನೆ ದಿವಸ ಬಳಸಿದ ಪದದ ಬಗ್ಗೆ ನೀವು ನೆನ್ನೆ ದಿವಸವೇ ರೂಲಿಂಗ್ ಕೊಟ್ಟಿರಿ. ಆದರೆ ಇವರ ಕೇಸ್‌ನಲ್ಲಿ ಏತಕ್ಕೆ ನಿಧಾನ ಮಾಡುತ್ತೀರಿ? ಈ ಒಂದು ತಾರತಮ್ಯ ಏತಕ್ಕೆ?